

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 8 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ




**ಬಿ. ರವೀಶ್ ಕುಮಾರ್**

**ಕನ್ನಡ ಭಾಷಾ ಶಿಕ್ಷಕರು**

ಸ. ಪ್ರೌ. ಶಾಲೆ, ಕೇರ್ಗಳ್ಳಿ,

ಮೈಸೂರು ತಾಲೂಕು ಮತ್ತು ಜಿಲ್ಲೆ. 570026

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 8 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

# ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 4 |
| 5 | ನೀಲ ನಕಾಶೆ | 5 | 6 |
| 6 | ಪ್ರಶ್ನೆ ಪತ್ರಿಕೆ | 7 | 10 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 11 | 19 |
| 8 | ಪ್ರಶ್ನಾನುಸಾರ ವಿಶ್ಲೇಷಣೆ | 20 | 21 |

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 8 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 14 |
| 2 | ಗ್ರಹಿಕೆ | 36 | 36 | 19 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 07 | 07 | 07 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 20 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 33 | 33 | 11 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 20 | 20 | 05 |
| 6 | ದೀರ್ಘ ಉತ್ತರ – 3 (ಐದು ಅಂಕಗಳ ಪ್ರಶ್ನೆಗಳು) | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | 21 |
| 2 | ಸಾಧಾರಣ | 50 | 50 | 19 |
| 3 | ಕಠಿಣ | 20 | 20 | 05 |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಹೂವಾದ ಹುಡುಗಿ | 7 | 4 |
| 2 | ಯಶೋಧರೆ | 7 | 4 |
| 3 | ಅಮ್ಮ | 7 | 2 |
| 4 | ಸಪ್ತಾಕ್ಷರೀ ಮಂತ್ರ | 7 | 3 |
| ** | ** | ** | ** |
| ** | ** | ** | ** |
| ** | ** | ** | ** |
| ** | ** | ** | ** |
| | ಗದ್ಯ ಒಟ್ಟು | 28 | 13 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವಚನಾಮೃತ | 8 | 3 |
| 2 | ಸೋಮೇಶ್ವರ ಶತಕ | 7 | 2 |
| 3 | ಜೀವನ ದರ್ಶನ | 7 | 3 |
| 4 | ರಾಮಧಾನ್ಯ ಚರಿತೆ | 8 | 3 |
| ** | ** | ** | ** |
| ** | ** | ** | ** |
| ** | ** | ** | ** |
| ** | ** | ** | ** |
| | ಪದ್ಯ ಒಟ್ಟು | 30 | 11 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಆಹುತಿ | 4 | 2 |
| 2 | ಮಗಳಿಗೆ ಬರೆದ ಪತ್ರಗಳು | 1 | 1 |
| 3 | ಆಟೋರಿಕ್ಷಾದ ರಸ ಪ್ರಸಂಗಗಳು | 4 | 2 |
| ** | ** | ** | ** |
| ** | ** | ** | ** |
| | ಪದ್ಯ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

## ಹಂತ : 5(ಎ) 8 ನೆಯ ತರಗತಿ – ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಹೂವಾದ ಹುಡುಗಿ | ** | 1(1) | ** | ** | ** | 1(1) | 1(2) | ** | ** | ** | 1(3) | ** | ** | ** | ** | 2(1) | 1(2) | 1(3) | ** | ** | 07 | 04 |
| 2 | ಯಶೋಧರೆ | ** | 2(1) | 1(3) | ** | ** | ** | 1(2) | ** | ** | ** | ** | ** | ** | ** | ** | 2(1) | 1(2) | 1(3) | ** | ** | 07 | 04 |
| 3 | ಅಮ್ಮ | ** | ** | ** | ** | ** | ** | ** | ** | ** | ** | 1(3) | 1(4) | ** | ** | ** | ** | ** | 1(3) | 1(4) | ** | 07 | 02 |
| 4 | ಸಪ್ತಾಕ್ಷರೀ ಮಂತ್ರ | ** | ** | ** | ** | ** | ** | 2(2) | ** | ** | ** | 1(3) | ** | ** | ** | ** | ** | 2(2) | 1(3) | ** | ** | 07 | 03 |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| | **ಗದ್ಯ ಒಟ್ಟು** | ** | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ವಚನಾಮೃತ | ** | ** | 1(3) | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 2(3) | ** | ** | 08 | 03 |
| 2 | ಸೋಮೇಶ್ವರ ಶತಕ | ** | ** | ** | ** | ** | ** | ** | ** | ** | ** | 1(3) | ** | ** | 1(4) | ** | ** | ** | 1(3) | 1(4) | ** | 07 | 02 |
| 3 | ಜೀವನ ದರ್ಶನ | ** | 1(1) | ** | 1(4) | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | 1(4) | ** | 07 | 03 |
| 4 | ರಾಮಧಾನ್ಯ ಚರಿತೆ | ** | ** | ** | ** | ** | 1(1) | ** | ** | ** | ** | 1(3) | 1(4) | ** | ** | ** | 1(1) | ** | 1(3) | 1(4) | ** | 08 | 03 |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| | **ಪದ್ಯ ಒಟ್ಟು** | ** | **1(1)** | **1(3)** | **1(4)** | ** | **1(1)** | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಆಹುತಿ | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 2 | ಮಗಳಿಗೆ ಬರೆದ ಪತ್ರಗಳು | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 3 | ಆಟೋರಿಕ್ಷಾದ ರಸಪ್ರಸಂಗಗಳು | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | 1(2) | ** | ** | ** | ** | ** |
| ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |

*****

## ಹಂತ : 5(ಎ) 8 ನೆಯ ತರಗತಿ – ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

### ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ, ವಾಕ್ಯರಚನೆಗಳು.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕಣಾಂಶಗಳು | 6(1)) | ** | ** | ** | 4(1) | ** | ** | ** | ** | ** | ** | ** | ** | ** | 10(1) | ** | ** | ** | ** | ** | 10 | 10 |
| | **ಒಟ್ಟು** | **6(1)** | ** | ** | ** | **4(1)** | ** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **6(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **14 – 21** | | | | **19 – 36** | | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

**8 ನೆಯ ತರಗತಿ**

ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆ

**ವಿಷಯ ; ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**

**ಸಮಯ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ;
   (ಎ) ಐದು (ಬಿ) ಆರು
   (ಸಿ) ಏಳು (ಡಿ) ಒಂಬತ್ತು
2. 'ಮಳೆಗಾಲ' ಪದದಲ್ಲಿ ಆಗಿರುವ ಸಂಧಿಯಿದು;
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಜಶ್ತ್ವ
3. 'ಮನೆಯಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
   (ಎ) ಚತುರ್ಥಿ (ಬಿ) ಪಂಚಮಿ
   (ಸಿ) ಷಷ್ಠಿ (ಡಿ) ಸಪ್ತಮಿ
4. ಈ ಕೆಳಗಿನ ಪದಗಳಲ್ಲಿ ದಿಗ್ವಾಚಕಕ್ಕೆ ಉದಾಹರಣೆಯಾದ ಪದವಿದು;
   (ಎ) ಸಾವಿರ (ಬಿ) ಪಡುವಣ
   (ಸಿ) ನೋಟ (ಡಿ) ಹೊಸದು
5. ಒಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯವು;
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
6. ಇವುಗಳಲ್ಲಿ ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು;
   (ಎ) ಮೆಲ್ನುಡಿ (ಬಿ) ಸಪ್ತಾಕ್ಷರೀ
   (ಸಿ) ವಯೋವೃದ್ಧ (ಡಿ) ಮುಂದಲೆ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** . **4*1=4**

7. ಕೋಗಿಲೆ : ಕೋಕಿಲ : : ಕಾರ್ಯ : ..................
8. ನ್ಯಗ್ರೋಧ : ಆಲದಮರ : : ಉಡುರಾಜ : ..........................................
9. ಸಕ್ಕದ : ಸಜಾತೀ ಸಂಯುಕ್ತಾಕ್ಷರ : : ಸಂಸ್ಕೃತ : ...............................................
10. ಕಾರ್ಖಾನೆ : ಹಿಂದುಸ್ಥಾನೀ ಪದ : : ಕೋರ್ಟ್ : ...................................................

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** . **7*1=7**

11. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದನು?
12. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?
13. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?

14. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?
15. ವ್ಯಕ್ತಿಯು ಮುಕ್ತಿಯನ್ನು ಪಡೆಯಲು ಏನು ಮಾಡಬೇಕು?
16. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?
17. ನೆಹರು ಅವರು ಪತ್ರವನ್ನು ಯಾರಿಗೆ ಬರೆದಿದ್ದಾರೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. .** **10*2=20**

18. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆಮಗ ಹೇಗೆ ಕಂಡು ಹಿಡಿದನು?
19. ರಾಜನು "ಈಗ ನೀನಿರುವ ರೀತಿ ಸಂನ್ಯಾಸವಲ್ಲವೇ" ಎನ್ನಲು ಕಾರಣವೇನು?
20. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಮುನಿಯು ಹೇಗೆ ಸತ್ಕರಿಸಿದನು?
21. ಮುದ್ದಣನು ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯನ್ನು ಹೇಗೆ ವಿವರಿಸುತ್ತಾನೆ?
22. ಆಯ್ದಕ್ಕಿ ಮಾರಯ್ಯ ಅವರು ಕಾಯಕದ ಮಹತ್ತ್ವವನ್ನು ಹೇಗೆ ನಿರೂಪಿಸಿದ್ದಾರೆ?
23. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದನೆಂದು ಗೋಪಾಲದಾಸರು ಹೇಳಿದ್ದಾರೆ?
24. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣವೇನು?
25. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಬರಲು ಕಾರಣವೇನು?
26. ಶ್ರೀ ಹೆಚ್. ನರಸಿಂಹಯ್ಯ ಅವರಿಗೆ ವಿಮಾನ ಯಾನದ ಬಗ್ಗೆ ಭಯವಿರಲಿಲ್ಲ ಏಕೆ?
27. ಶ್ರೀ ಹೆಚ್. ನರಸಿಂಹಯ್ಯ ಅವರಿಗೆ ಬೆಂಗಳೂರಿನಲ್ಲಿ ಸಂಚಾರದ ಮಾಡುವುದು ತಾಪತ್ರಯದ ಕೆಲಸ ಅನ್ನಿಸುತ್ತಿತ್ತು. ಏಕೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. .** **2*3=6**

28. ಮಾಸ್ತಿ ವೆಂಕಟೇಶಯ್ಯಂಗಾರ್

29. ಅಲ್ಲಮಪ್ರಭು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. .** **1*3=3**

30. ಕೆಲರು ಗೋದಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. .** **1*3=3**

31. ಮನೋರಮೆಯ ಮುಖ ಕಮಲದಂತೆ ಅರಳಿತು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. .**

**1*3=3**

32. ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

**ಅಥವಾ**

ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 6*3=18**

33. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ"
34. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"
35. "ಸಾಲ್ಗುಮೀ ಪರಿಹಾಸಂ"
36. "ಕಾಯವನೆ ಪ್ರಸಾದ ಕಾಯವ ಮಾಡಿ ಸಲಹಿದರು"
37. "ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ"
38. "ನಮ್ಮಯ ದೇಶಕತಿಶಯ ನರೆದಲೆಗ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . 1*4=4**

39. ಸತಿ ಅನುಕೂಲ .........................................................

.........................................................................

.........................................................................

.................................................. ಉಪಶಾಂತವಿರಬೇಕು ।

**ಅಥವಾ**

ಜ್ಞಾನವೆಂಬೊ .........................................................

.........................................................................

.........................................................................

.................................................. ಮುತ್ತಿನಾರತಿ ಎತ್ತುವೆ ।

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4**

**40.** ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತಂ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

41. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಹೇಗೆ ವರ್ಣಿಸಲಾಗಿದೆ?

**ಅಥವಾ**

'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ.

42. ಶ್ರೀರಾಮನು ನರೆದಲೆಗ ಹಾಗೂ ವ್ರೀಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು?

**ಅಥವಾ**

ನರೆದಲೆಗ ಹಾಗೂ ವ್ರೀಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

43. ದೈನ್ಯದ ಬುಡದಲ್ಲಿ ಭಯವಿದೆ. ಭಯವೇ ನರರನ್ನು ದೀನನನ್ನಾಗಿ ಮಾಡುತ್ತದೆ. ಭಯವೆಂದರೆ ದಟ್ಟಡವಿಯಲ್ಲಿ ದಾರಿ ತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯ ಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆ ನಾಯಿ ಬೆನ್ನಟ್ಟಿದ ಮೊಲವೇ ಭಯ. ಭಯ ಹುಟ್ಟುವುದು ಅಜ್ಞಾನದಿಂದ, ಪಾಪ ಶಂಕೆಯಿಂದ, ದೂಷಿತ ಹೃದಯದಿಂದ. ಜ್ಞಾನ ಹೆಚ್ಚಿದಂತೆ ಭಯ ಕಡಿಮೆಯಾಗುವುದು. ಭೀಷ್ಮ, ದ್ರೋಣನಂತೆ ಒಡೆಯನಿಗೋಸ್ಕರ ದೇಹವನ್ನರ್ಪಿಸುವುದು ಕಾರ್ಯವೆಂದು ತಿಳಿದಿದ್ದರೂ ಆ ಕಾರ್ಯದ ಸಾಧ್ಯತೆ ಅಸಾಧ್ಯತೆಗಳ ಬಗ್ಗೆ ಅಭಿಪ್ರಾಯವು ಭೀಷ್ಮ, ದ್ರೋಣರಲ್ಲಿಯಂತೆ

ಸ್ಪಷ್ಟವಾಗಿರಬೇಕು. ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲವ ಉರುಳಬೇಕಾದಲ್ಲಿ ಉರುಳುವ ಗೋಲವಾಗಬೇಕು ವ್ಯಕ್ತಿತ್ವ. ಈ ಕೇಂದ್ರದಲ್ಲಿಯೇ ವ್ಯಕ್ತಿ–ಸಮಾಜಗಳ ಸಾಮರಸ್ಯದ ಬೀಜವಿದೆ.

ಪ್ರಶ್ನೆಗಳು :–

43. (1) ಭಯವನ್ನು ಹೇಗೆ ವರ್ಣಿಸಲಾಗಿದೆ?
43. (2) ನಮ್ಮ ವ್ಯಕ್ತಿತ್ವ ಹೇಗಿರಬೇಕು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

**44.** ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹೆಮ್ಮರಗಾಲ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಮಾಧವಿ' ಎಂದು ಭಾವಿಸಿಕೊಂಡು, ನಿಮ್ಮ ಅಕ್ಕನ ಮದುವೆಗೆ 5 ದಿನಗಳು ರಜೆಯನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ದಾವಣಗೆರೆಯ ಬಾಪೂಜಿ ನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಮಾನಂದ' ಎಂದು ಭಾವಿಸಿಕೊಂಡು ಚಿತ್ರದುರ್ಗದ ಚಳ್ಳಕೆರೆಯಲ್ಲಿ ವಾಸವಾಗಿರುವ ನಿಮ್ಮ ತಂದೆ ನಿಜಲಿಂಗಪ್ಪ ಎನ್ನುವವರಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ ಸಮಾರಂಭದ ಸಂಭ್ರಮವನ್ನು ಕುರಿತು ಪತ್ರ ಬರೆಯಿರಿ

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. . 1*5=5**

**45.** ಕಂಪ್ಯೂಟರ್ ಬಳಕೆಯಿಂದಾಗುವ ಪ್ರಯೋಜನಗಳು

**ಅಥವಾ**

ವರದಕ್ಷಿಣೆ – ಒಂದು ಸಾಮಾಜಿಕ ಪಿಡುಗು.

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 8 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ

**ವಿಷಯ ; ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**

**ಸಮಯ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

---

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

**(ಕ್ರಮಾಂಕದೊಂದಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ)**

1. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ;
   (ಎ) ಐದು (ಬಿ) ಆರು
   (ಸಿ) ಏಳು (ಡಿ) ಒಂಬತ್ತು
   **ಉತ್ತರ : (ಎ) ಐದು**
2. 'ಮಳೆಗಾಲ' ಪದದಲ್ಲಿ ಆಗಿರುವ ಸಂಧಿಯಿದು;
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಜಶ್ತ್ವ
   **ಉತ್ತರ : (ಸಿ) ಆದೇಶ**
3. 'ಮನೆಯಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
   (ಎ) ಚತುರ್ಥಿ (ಬಿ) ಪಂಚಮಿ
   (ಸಿ) ಷಷ್ಠಿ (ಡಿ) ಸಪ್ತಮಿ
   **ಉತ್ತರ : (ಡಿ) ಸಪ್ತಮಿ**
4. ಈ ಕೆಳಗಿನ ಪದಗಳಲ್ಲಿ ದಿಗ್ವಾಚಕಕ್ಕೆ ಉದಾಹರಣೆಯಾದ ಪದವಿದು;
   (ಎ) ಸಾವಿರ (ಬಿ) ಪಡುವಣ
   (ಸಿ) ನೋಟ (ಡಿ) ಹೊಸದು
   **ಉತ್ತರ : (ಬಿ) ಪಡುವಣ**
5. ಒಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯವು;
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
   **ಉತ್ತರ : (ಎ) ಸಾಮಾನ್ಯ ವಾಕ್ಯ**
6. ಇವುಗಳಲ್ಲಿ ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು;
   (ಎ) ಮೆಲ್ನುಡಿ (ಬಿ) ಸಪ್ತಾಕ್ಷರೀ
   (ಸಿ) ವಯೋವೃದ್ಧ (ಡಿ) ಮುಂದಲೆ
   **ಉತ್ತರ : (ಸಿ) ವಯೋವೃದ್ಧ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** . **4*1=4**

**(ಪ್ರತಿ ಸರಿ ಉತ್ತರಕ್ಕೆ 1 ಅಂಕ)**

**7.** ಕೋಗಿಲೆ : ಕೋಕಿಲ : : ಕಾರ್ಯ : **ಕಜ್ಜ.**

**8.** ನ್ಯಗ್ರೋಧ : ಆಲದಮರ : : ಉಡುರಾಜ : **ಚಂದ್ರ**

9. ಸಕ್ಕದ : ಸಜಾತೀ ಸಂಯುಕ್ತಾಕ್ಷರ : : ಸಂಸ್ಕೃತ : **ವಿಜಾತಿ ಸಂಯುಕ್ತಾಕ್ಷರ**

**10.** ಕಾರ್ಖಾನೆ : ಹಿಂದುಸ್ಥಾನೀ ಪದ : : ಕೋರ್ಟ್ : **ಇಂಗ್ಲಿಷ್ ಪದ.**

**III.** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . **7*1=7**

(ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)

11. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದನು?
**ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗನು ಮಂತ್ರಿಯ ಮಗನ ಬಳಿ ಹೇಳಿದನು.**
12. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?
**ಕೂಲಿ ಮಾಡಿ ತಮ್ಮನ್ನು ಸಾಕುತ್ತಿದ್ದ ತಾಯಿಯ ಕಷ್ಟವನ್ನು ನೋಡಿದ ಕಿರಿಯ ಮಗಳು ತಾಯಿಗೆ ನೆರವಾಗಲು ಹಣ ಸಂಪಾದಿಸುವ ಸಲುವಾಗಿ ಹೂವಿನ ಗಿಡವಾದಳು.**
13. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?
**ಯಶೋಧರೆಯು ಮತ್ತೊಮ್ಮೆ ತನ್ನ ಪತಿಯನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ.**
14. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?
**ತಂದೆಯನ್ನು ಕರೆತರಲು ಹೋಗುವೆನೆಂದು ರಾಹುಲನು ಹೇಳಿದನು.**
15. ವ್ಯಕ್ತಿಯು ಮುಕ್ತಿಯನ್ನು ಪಡೆಯಲು ಏನು ಮಾಡಬೇಕು?
**ವ್ಯಕ್ತಿಯು ಮುಕ್ತಿಯನ್ನು ಪಡೆಯಲು ಭಕ್ತಿ ಬೇಕು, ವಿರಕ್ತಿ ಬೇಕು ಹಾಗೂ ಸರ್ವಶಕ್ತಿ ಬೇಕು.**
16. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?
**ಹರಿಹರ ವಿರಂಚಿಗಳನ್ನು ರಾಗಿ ಮತ್ತು ಭತ್ತಗಳ ನಡುವೆ ಉಂಟಾದ ವ್ಯಾಜ್ಯವನ್ನು ಪರಿಹರಿಸಲು ಅಯೋಧ್ಯೆಗೆ ಕರೆಸಲಾಗುತ್ತದೆ.**
17. ನೆಹರು ಅವರು ಪತ್ರವನ್ನು ಯಾರಿಗೆ ಬರೆದಿದ್ದಾರೆ?
**ನೆಹರು ಅವರು ಪತ್ರವನ್ನು ತನ್ನ ಮಗಳಾದ ಇಂದಿರಾ ಪ್ರಿಯದರ್ಶಿನಿ ಅವರಿಗೆ ಬರೆದಿದ್ದಾರೆ.**

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . **10*2=20**

(ಉತ್ತರದ ಅಂಶಗಳನ್ನಾದರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)

18. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆಮಗ ಹೇಗೆ ಕಂಡು ಹಿಡಿದನು?
**ದೊರೆಯ ಮಗನಿಗೆ ತಮ್ಮ ಅರಮನೆಗೆ ಇಷ್ಟು ಸೊಗಸಾದ ಹೂವು ಎಲ್ಲಿಂದ ಬರುತ್ತದೆ ಎಂಬುದನ್ನು ತಿಳಿಯುವ ಕುತೂಹಲ ಉಂಟಾಯಿತು. ಅದಕ್ಕಾಗಿ ಆತನು ತಮ್ಮ ಅರಮನೆಗೆ ಹೂವು ತಂದು ಕೊಡುವ ದೊಡ್ಡ ಹುಡುಗಿಯನ್ನು ಹಿಂಬಾಲಿಸಿದನು. ಮನೆಯ ಸುತ್ತ ಹೂವಿನ ಗಿಡಗಳು ಇಲ್ಲದ್ದನ್ನು ಗಮನಿಸಿ, ಅರಮನೆಗೆ ಹಿಂದಿರುಗಿದನು. ಮಾರನೆಯ ಸೂರ್ಯ ಹುಟ್ಟುವ ಮೊದಲೇ ಹೂವು ತರುತ್ತಿದ್ದ ಮನೆಯ ಮುಂದೆ ಇದ್ದ ದೊಡ್ಡ ಮರದ ಮೇಲೆ ಅವಿತು, ಕುಳಿತು, ಹುಡುಗಿ ಹೂವಾಗುವುದನ್ನು ಕಂಡನು.**
19. ರಾಜನು "ಈಗ ನೀನಿರುವ ರೀತಿ ಸಂನ್ಯಾಸವಲ್ಲವೇ" ಎನ್ನಲು ಕಾರಣವೇನು?
**ಯಶೋಧರೆಯು ರಾಜನನ್ನು ಕುರಿತು "ಈ ಹಿಂದೆ ಗಾರ್ಗಿಯು ಸಂನ್ಯಾಸದಲ್ಲಿ ತನ್ನ ಪತಿಯೊಡನೆ ಅರಣ್ಯಕ್ಕೆ ತೆರಳಿದಳು ಎಂಬುದನ್ನು ಕೇಳಿರುವೆನು. ನಾನೂ ಸಹ ಅಂತೆಯೇ ಸಂನ್ಯಾಸವನ್ನು ಸ್ವೀಕರಿಸಿ ನನ್ನ ಪತಿಯ ಬಳಿಗೆ ಹೋಗುವೆನು. ಅವನೊಡನೆ ಸಂನ್ಯಾಸಿಯಂತೆಯೇ ಜೀವನ ನಡೆಸುವೆನು" ಎಂದು ಹೇಳುತ್ತಾಳೆ. ಆಗ ರಾಜನು "ನಿನ್ನ ಪತಿಯು ತೊರೆದು ಹೋದ ಕಳೆದ ಹತ್ತು ವರ್ಷಗಳಿಂದಲೂ ನೀನು ಸಂನ್ಯಾಸಿಯಂತೆಯೇ ಇರುವೆಯಲ್ಲ" ಎಂದು ಹೇಳುತ್ತಾನೆ.**
20. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಮುನಿಯು ಹೇಗೆ ಸತ್ಕರಿಸಿದನು?
**ಅರಣ್ಯಕ ಮುನಿಯು ತನ್ನ ಆಶ್ರಮಕ್ಕೆ ಬಂದ ಶತ್ರುಘ್ನ ಮತ್ತು ಪರಿವಾರದವರನ್ನು ಗೌರವದಿಂದ ಬರಮಾಡಿಕೊಂಡು, ಕೈ ಕಾಲುಗಳಿಗೆ ನೀರನ್ನು ಕೊಟ್ಟು, ಕುಳ್ಳಿರಿಸಿದನು. ನಂತರ ಅವನು ಅವರೆಲ್ಲರಿಗೂ ಸವಿಯಾದ ಊಟವನ್ನು ನೀಡಿ, ಆತ್ಮೀಯವಾಗಿ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯನ್ನು ನಡೆಸಿಕೊಟ್ಟನು.**
21. ಮುದ್ದಣನು ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯನ್ನು ಹೇಗೆ ವಿವರಿಸುತ್ತಾನೆ?
**ಮುದ್ದಣನು ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆ ಏನೆಂದರೆ "ಅವರ ಒಂದು ನುಡಿಯ ಸಾಮರ್ಥ್ಯದಿಂದ ಮೂರು ಲೋಕಗಳನ್ನು ನಾಶಪಡಿಸುವ, ಹೊಗಳುವ, ತೆಗಳುವ, ವಶಪಡಿಸಿಕೊಳ್ಳುವ, ಆಳುವ, ಅನುಭವಿಸುವ, ಮುಳುಗಿಸುವ, ಕಾವ್ಯರಚನೆ ಮಾಡುವ ಮಂತ್ರಶಕ್ತಿಯು ಶರಣಗಾರದ ಬಣ್ಣದ ಕವಿಗಳಿಗೆ ಕೈವಶವಾಗಿದೆ" ಎಂದು ವಿವರಿಸುತ್ತಾನೆ.**

22. ಆಯ್ದಕ್ಕಿ ಮಾರಯ್ಯ ಅವರು ಕಾಯಕದ ಮಹತ್ತ್ವವನ್ನು ಹೇಗೆ ನಿರೂಪಿಸಿದ್ದಾರೆ?
**"ಕಾಯಕದಲ್ಲಿ ನಿರತವಾದಾಗ ಗುರುದರ್ಶನವಾದರೂ ಮರೆಯಬೇಕು. ಲಿಂಗಪೂಜೆಯನ್ನು ಮಾಡುವುದನ್ನು ಮರೆಯಬೇಕು. ಜಂಗಮರು ಮುಂದೆ ಬಂದರೂ ಅವರ ಹಂಗನ್ನು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವನ್ನು ಇತ್ತಾದರೂ ಕಾಯಕದಲ್ಲಿ ತಲ್ಲೀನರಾಗಬೇಕು" ಎಂಬುದಾಗಿ ಆಯ್ದಕ್ಕಿ ಮಾರಯ್ಯ ಅವರು ಕಾಯಕದ ಮಹತ್ತ್ವವನ್ನು ನಿರೂಪಿಸಿದ್ದಾರೆ.**

23. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದನೆಂದು ಗೋಪಾಲದಾಸರು ಹೇಳಿದ್ದಾರೆ?
**"ದೇವನು ತನ್ನನ್ನು ಪ್ರೀತಿಯಿಂದ ಸ್ಮರಿಸುವವರ ಪಾತಕಗಳನ್ನು ಪರಿಹರಿಸುವನು. ಭಕ್ತನಾದ ಅಕ್ರೂರನನ್ನು ಪ್ರೀತಿಯಿಂದ ಸಲಹಿದನು. ತನ್ನ ಶಂಖಚಕ್ರವನ್ನು ಪ್ರಯೋಗಿಸಿ ಗಜೇಂದ್ರನನ್ನು ಮೊಸಳೆಯ ಬಾಧೆಯಿಂದ ಕಾಪಾಡಿದನು. ಅಜಮಿಳನು ಭಕ್ತಿಯಿಂದ 'ನಾರಾಯಣ' ಎಂದು ಕರೆದಾಗ ಬಂದು ಸಲಹಿದನು. ಹೀಗೆ ದೇವನು ತನ್ನ ಭಕ್ತರು ಪ್ರೀತಿಯಿಂದ ಕರೆದಾಗ ಬಂದು ರಕ್ಷಣೆಯನ್ನು ಮಾಡುತ್ತಾನೆ" ಎಂದು ಗೋಪಾಲದಾಸರು ಹೇಳುತ್ತಾರೆ.**

24. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣವೇನು?
**ಯುವಕನಿಗೆ ಲಂಡನ್ನಿನಲ್ಲಿ ಲಾ ಕಲಿತು, ಬ್ಯಾರಿಸ್ಟರ್ ಆಗಬೇಕೆಂಬ ಬಲವಾದ ಇಚ್ಚೆಯಿತ್ತು. ಅದಕ್ಕಾಗುವ ಖರ್ಚನ್ನು ಕೊಡುವ ಸಾಮರ್ಥ್ಯ ಹುಡುಗಿಯ ಮನೆಯವರಿಗೆ ಇರಲಿಲ್ಲ. ಆದ್ದರಿಂದ ಅವನು ಬಡವರ ಮನೆಯ ಹುಡುಗಿಯನ್ನು ಮದುವೆ ಆಗಲಿಲ್ಲ.**

25. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಬರಲು ಕಾರಣವೇನು?
**ಯುವಕನು ಮದರಾಸಿನಲ್ಲಿ ಕೆಲಸ ಹುಡುಕಲು ಪ್ರಯತ್ನಿಸಿದನು. ಆದರೆ ಅವನಿಗೆ ಎಲ್ಲಿಯೂ ಕೆಲಸ ಸಿಗಲಿಲ್ಲ. ಕೈಯಲ್ಲಿದ್ದ ಹಣವೂ ಖರ್ಚಾಗಿತ್ತು. ಆದ್ದರಿಂದ ಅವನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಕೆಲಸ ಕೊಡಿಸುವಂತೆ ಕೇಳಲು ಹೋದನು. ಆಗ ಮುದುಕನು ತನ್ನ ಮಗಳು ಮತ್ತು ಸೊಸೆಗೆ ಪಾಠ ಹೇಳಿಕೊಡುವ ಕೆಲಸಕ್ಕಾಗಿ ಯುವಕನ್ನು ನೇಮಕ ಮಾಡಿಕೊಂಡನು.**

26. ಶ್ರೀ ಹೆಚ್. ನರಸಿಂಹಯ್ಯ ಅವರಿಗೆ ವಿಮಾನ ಯಾನದ ಬಗ್ಗೆ ಭಯವಿರಲಿಲ್ಲ ಏಕೆ?
ಶ್ರೀ ಹೆಚ್. ನರಸಿಂಹಯ್ಯ ಅವರಿಗೆ **ವಿಮಾನದ ಯಾನದ ಬಗ್ಗೆ ಭಯವಿಲ್ಲ. ಏಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರುವುದಿಲ್ಲ; ಜೊತೆಗೆ ವಿಮಾನವನ್ನು ಯಾರೂ ಓವರ್ ಟೇಕ್ ಮಾಡುವ ಪ್ರಸಂಗವೂ ಇಲ್ಲ. ಆದ್ದರಿಂದ ಅವರಿಗೆ ವಿಮಾನ ಯಾನದ ಬಗ್ಗೆ ಭಯವಿರಲಿಲ್ಲ.**

27. ಶ್ರೀ ಹೆಚ್. ನರಸಿಂಹಯ್ಯ ಅವರಿಗೆ ಬೆಂಗಳೂರಿನಲ್ಲಿ ಸಂಚಾರದ ಮಾಡುವುದು ತಾಪತ್ರಯದ ಕೆಲಸ ಅನ್ನಿಸುತ್ತಿತ್ತು. ಏಕೆ?
ಶ್ರೀ ಹೆಚ್. ನರಸಿಂಹಯ್ಯ ಅವರಿಗೆ **"ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಕಾರ್ ಇರುವ ಕೆಲವೇ ಮಂದಿಗೆ, ಸ್ಕೂಟರಿರುವ ಸಾಕಷ್ಟು ಮಂದಿಗೆ ಇದೇನು ಅಂತಹ ಸಮಸ್ಯೆ ಅಲ್ಲ. ಆದರೆ ನನ್ನಂತಹವನಿಗೆ ಇದೊಂದು ತಾಪತ್ರಯದ ಕೆಲಸ" ಎಂಬುದು ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯ.**

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. .** **2*3=6**

| | |
|---|---|
| **ಜನ್ಮಸ್ಥಳ ಮತ್ತು ಕಾಲ** | **= 1 ಅಂಕ** |
| **ಕೃತಿಗಳು ಮತ್ತು ಪ್ರಶಸ್ತಿಗಳು** | **= 1 ಅಂಕ** |
| **ವಾಕ್ಯರೂಪದ ವಿವರಣೆಗೆ ಮತ್ತು ಭಾಷಾ ಶೈಲಿಗೆ** | **= 1 ಅಂಕ** |
| **ಒಟ್ಟು** | **= 3 ಅಂಕಗಳು** |

28. ಮಾಸ್ತಿ ವೆಂಕಟೇಶಯ್ಯಂಗಾರ್
**'ಕನ್ನಡದ ಆಸ್ತಿ ಮಾಸ್ತಿ' ಎಂದು ಪ್ರಸಿದ್ಧರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕ್ರಿ. ಶ. 1891 ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ ಜನಿಸಿದರು. 'ಸಣ್ಣಕಥೆಗಳ ಜನಕ' ಎಂದು ಪ್ರಖ್ಯಾತರಾದ ಇವರ ಸಣ್ಣಕಥೆಗಳು ಹದಿಮೂರು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಇವರು ಯಶೋಧರೆ, ಚಿಕವೀರ ರಾಜೇಂದ್ರ, ಗೌತಮಿ ಹೇಳಿದ ಕಥೆ, ಸಾರಿಪುತ್ರನ ಕೊನೆಯ ದಿನಗಳು, ಕುಚೇಲನ ಭಾಗ್ಯ, ಹೇಮಕೂಟದಿಂದ ಬಂದ ಮೇಲೆ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.**

29. ಅಲ್ಲಮಪ್ರಭು

**ಶಿವಶರಣ ಅಲ್ಲಮಪ್ರಭು ಅವರು ಕ್ರಿ. ಶ. ಸುಮಾರು 12 ನೆಯ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವಿಯಲ್ಲಿ ಜನಿಸಿದರು. ಇವರ ತಂದೆಯ ಹೆಸರು ನಿರಹಂಕಾರ; ತಾಯಿಯ ಹೆಸರು ಸುಜ್ಞಾನಿ. ಇವರು ಕಲ್ಯಾಣದಲ್ಲಿ ಬಸವಣ್ಣ ಅವರು ಸ್ಥಾಪಿಸಿದ ಶೂನ್ಯಪೀಠ'ದ ಅಧ್ಯಕ್ಷರಾಗಿ ಶಿವಶರಣರಿಗೆ ಮಾರ್ಗದರ್ಶನವನ್ನು ಮಾಡಿದರು. ಸತ್ಯಶೋಧನೆಯೇ ಅಲ್ಲಮಪ್ರಭುದೇವರ ಪರಮಗುರಿಯಾಗಿತ್ತು. ಇವರು ಗುಹೇಶ್ವರಾ ಎಂಬ ಅಂಕಿತನಾಮದಿಂದ ವಚನಗಳ ರಚನೆಯನ್ನು ಮಾಡಿದ್ದಾರೆ.**

VI. **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** . **1*3=3**

| | |
|---|---|
| **ಪ್ರಸ್ತಾರ ಹಾಕುವುದು** | **= 1 ಅಂಕ** |
| **ಗಣ ವಿಭಾಗಿಸುವುದು** | **= 1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **= 1 ಅಂಕ** |
| **ಒಟ್ಟು** | **= 3 ಅಂಕಗಳು** |

30. ಕೆಲರು ಗೋದಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ

| | | | |
|---|---|---|---|
| **3** | **4** | **3** | **4** |
| ∪∪∪ | — ∪ ∪ | — ∪ | ∪ ∪ ∪∪ |
| **ಕೆಲರು** | **ಗೋದಿಯ** | **ಸಾಮೆ** | **ಯನು ಕೆಲ** |

| | | | |
|---|---|---|---|
| **3** | **4** | **3** | **4** |
| ∪∪∪ | ∪∪ ∪∪ | — ∪ | — ∪∪ |
| **ಕೆಲರು** | **ನವಣೆಯ** | **ಕಂಬು** | **ಜೋಳವ** |

| | | | | | | |
|---|---|---|---|---|---|---|
| **3** | **4** | **3** | **4** | **3** | **4** | **ಗುರು** |
| ∪∪ ∪ | — ∪∪ | — ∪ | ∪∪ ∪∪ | — ∪ | ∪∪ ∪∪ | — |
| **ಕೆಲರು** | **ಹಾರಕ** | **ವೆಂದು** | **ಕೆಲವರು** | **ನೆಲ್ಲ** | **ನತಿಶಯ** | **ವ** |

**ಈ ಮೇಲಿನ ಪದ್ಯವು ಮಾತ್ರಾ ಗಣದ 'ಭಾಮಿನಿ ಷಟ್ಪದಿ'ಯಲ್ಲಿ ರಚಿತವಾಗಿದೆ.**

**VII.** **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** . **1*3=3**

| | |
|---|---|
| **ಅಲಂಕಾರದ ಹೆಸರು ಬರೆಯುವುದು** | **= 1 ಅಂಕ** |
| **ಲಕ್ಷಣ ಬರೆಯುವುದು** | **= 1 ಅಂಕ** |
| **ಸಮನ್ವಯ ಮಾಡುವುದು** | **= 1 ಅಂಕ** |
| **ಒಟ್ಟು** | **= 3 ಅಂಕಗಳು** |

31. ಮನೋರಮೆಯ ಮುಖ ಕಮಲದಂತೆ ಅರಳಿತು.

| | | |
|---|---|---|
| **ಅಲಂಕಾರ** | : | **ಉಪಮಾ ಅಲಂಕಾರ** |
| **ಲಕ್ಷಣ** | : | **ಎರಡು ವಸ್ತುಗಳಿಗಿರುವ ಸಾದೃಶ್ಯ, ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾ ಅಲಂಕಾರವೆನ್ನುವರು .** |
| **ಉಪಮೇಯ** | : | **ಮನೋರಮೆಯ ಮುಖ** |
| **ಉಪಮಾನ** | : | **ಕಮಲ** |
| **ಉಪಮಾವಾಚಕ** | : | **ಅಂತೆ** |

**ಸಮಾನಧರ್ಮ : ಅರಳುವುದು**
**ಸಮನ್ವಯ : ಇಲ್ಲಿ ಉಪಮೇಯವಾದ ಮನೋರಮೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಈ ವಾಕ್ಯವು ಉಪಮಾ ಅಲಂಕಾರಕ್ಕೆ ಉದಾಹರಣೆಯಾಗಿದೆ.**

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. .**

**1*3=3**

| | |
|---|---|
| **ಗಾದೆಯ ಮಹತ್ವದ ವಿವರಣೆ** | **= 1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **= 1 ಅಂಕ** |
| **ಪದಬಂಧ – ಭಾಷಾ ಶೈಲಿ** | **= 1 ಅಂಕ** |
| **ಒಟ್ಟು** | **= 3 ಅಂಕಗಳು** |

32. ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

**ಅಥವಾ**

ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 6*3=18**

| | |
|---|---|
| **ಕವಿ, ಆಕರ ಕೃತಿ ಮತ್ತು ಪಾಠದ ಹೆಸರು** | **= 1 ಅಂಕ** |
| **ಸಂದರ್ಭ ವಿವರಣೆ** | **= 1 ಅಂಕ** |
| **ಸ್ವಾರಸ್ಯ ಮತ್ತು ಶೈಲಿ** | **= 1 ಅಂಕ** |
| **ಒಟ್ಟು** | **= 3 ಅಂಕಗಳು** |

33. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ"
**ಆಯ್ಕೆ : ಈ ವಾಕ್ಯವನ್ನು ಶ್ರೀ ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ಆರಿಸಲಾಗಿದೆ.**
**ಸಂದರ್ಭ : ಹೂವಿನ ಗಿಡವಾಗಿ ಪರಿವರ್ತನೆಗೊಳ್ಳುವ ಹುಡುಗಿಯು ತನ್ನ ನಾದಿನಿಯ ಬೇಜವಾಬ್ದಾರಿಯ ದೆಸೆಯಿಂದ ಅರ್ಧಂಬರ್ಧ ದೇಹವಾಗಿ ಮೋರಿಯಲ್ಲಿ ಬಿದ್ದಿದ್ದನ್ನು ಕಂಡ ಗಾಡಿ ಹೊಡೆಯುವವನು ಆ ದೇಹವನ್ನು ತೆಗೆದುಕೊಂಡು ಹೋಗಿ ಮುಂದಲೂರಿನ ಹಾಳು ಮಂಟಪದಲ್ಲಿ ಮಲಗಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.**
**ಸ್ವಾರಸ್ಯ : ಅರ್ಧಂಬರ್ಧ ದೇಹವಾಗಿರುವ ಅನಾಥೆಯಾದ ಹುಡುಗಿಗೆ ಈ ಊರಿನಲ್ಲಿ ಯಾರಾದರೂ ಆಶ್ರಯವನ್ನು ನೀಡಿ ಕಾಪಾಡಲಿ ಎಂಬ ಗಾಡಿಯವನ ಅಂತಃಕರಣವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.**

34. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"
**ಆಯ್ಕೆ : ಈ ವಾಕ್ಯವನ್ನು ಶ್ರೀ ಯು. ಆರ್. ಅನಂತಮೂರ್ತಿ ಅವರು ರಚಿಸಿರುವ 'ಸುರಗಿ' ಆತ್ಮಕಥೆಯಿಂದ ಆಯ್ದ 'ಅಮ್ಮ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.**
**ಸಂದರ್ಭ : ಲೇಖಕರು ತನ್ನ ಬಾಲ್ಯದ ದಿನಗಳನ್ನು ನೆನೆಪು ಮಾಡಿಕೊಳ್ಳುತ್ತ "ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕಪಡುತ್ತಾ ಕಾಯುತ್ತಿದ್ದೆನು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.**
**ಸ್ವಾರಸ್ಯ : ಕೃಷ್ಣಪ್ಪಯ್ಯ ಮೇಷ್ಟ್ರು ಬಹಳ ಕಟ್ಟುನಿಟ್ಟಿನ ಮೇಷ್ಟ್ರಾಗಿದ್ದರು. ಅವರು ಬರುವಾಗಲೇ ಬೆತ್ತವನ್ನು ತರುತ್ತಿದ್ದರು. ಆದ್ದರಿಂದ ಲೇಖಕರು ಈ ದಿನ ಅವರು ಬರದಿದ್ದರೆ ಸಾಕು ಎಂಬ ಭಾವವನ್ನು ಈ ಮಾತಿನ ಮೂಲಕ ಸ್ವಾರಸ್ಯವಾಗಿ ಅಭಿವ್ಯಕ್ತಪಡಿಸುತ್ತಾರೆ.**

35. "ಸಾಲ್ಗುಮೀ ಪರಿಹಾಸಂ"
**ಆಯ್ಕೆ : ಪ್ರಸ್ತುತ ವಾಕ್ಯವನ್ನು ಮುದ್ದಣನು ರಚಿಸಿರುವ 'ಶ್ರೀರಾಮಾಶ್ವಮೇಧಂ' ಎಂಬ ಕೃತಿಯಿಂದ ಆಯ್ದ, 'ಸಪ್ತಾಕ್ಷರೀ ಮಂತ್ರ' ಎಂಬ ಹಳಗನ್ನಡ ಗದ್ಯ ಭಾಗದಿಂದ ಆರಿಸಲಾಗಿದೆ.**
**ಸಂದರ್ಭ : 'ನಿನ್ನ ಮಾತನ್ನು ಸತ್ಯವೆಂದೇ ತಿಳಿದೆನು, ಇದು ಮಾಟದ ಮೋಸದ ಕೊಂಕುನುಡಿ ಎಂಬುದನ್ನು ತಿಳಿಯದೆ ಹೋದೆನು, ನೀನು ಕವಿಯೋ? ಹಾಸ್ಯಗಾರನೋ? ನಿನ್ನ ಕಾವ್ಯದ ಸೊಗಸನ್ನು ನಮ್ಮಂತಹ**

ಜಾಣ್ಮೆಯಿಲ್ಲದವರೆ ಹೊಗಳಬೇಕು, ಬಲ್ಲವರು ಇದನ್ನು ಮೆಚ್ಚುವರೇ?' ಎಂದು ಮನೋರಮೆಯು ಪರಿಹಾಸ ಮಾಡಿದ ಸಂದರ್ಭದಲ್ಲಿ ಮುದ್ದಣನು ಮನೋರಮೆಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಮುದ್ದಣನು ತನ್ನ ಕಾವ್ಯದ ನಡುವೆ ಹಾಸ್ಯಪ್ರಜ್ಞೆಯನ್ನು ಮೆರೆದು ಕಥೆಯನ್ನು ಮುಂದುವರಿಸಲು ತೊಡಗುವುದೇ ಈ ಮಾತಿನ ಸ್ವಾರಸ್ಯವಾಗಿದೆ.

36. "ಕಾಯವನೆ ಪ್ರಸಾದ ಕಾಯಕ ಮಾಡಿ ಸಲಹಿದರು"

ಆಯ್ಕೆ : ಈ. ವಾಕ್ಯವನ್ನು ಶ್ರೀ ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ'ದಿಂದ 'ವಚನಾಮೃತ' ಎಂಬ ಪದ್ಯಪಾಠಕ್ಕಾಗಿ ಆಯ್ದ ಶಿವಶರಣೆ ಲಿಂಗಮ್ಮ ಅವರ ವಚನದಿಂದ ಆರಿಸಲಾಗಿದೆ.

ಸಂದರ್ಭ : ಶಿವಶರಣೆ ಲಿಂಗಮ್ಮ ಅವರು ಬುದ್ಧಿಹೀನರು ಮತ್ತು ಶಿವಶರಣರ ಸಾಧನೆಯ ಮಾರ್ಗದ ನಡುವಿನ ವ್ಯತ್ಯಾಸವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : "ಬುದ್ಧಿಹೀನರು ಸುಮ್ಮನೇ ಕಾಯವನ್ನು ಕರಗಿಸುತ್ತಾರೆ. ಆದರೆ ಶಿವಶರಣರು ತಮ್ಮ ಕಾಯವನ್ನು ಕಾಯಕದಲ್ಲಿ ತೊಡಗಿಸಿ, ಪ್ರಸಾದ ಕಾಯವನ್ನಾಗಿ ಮಾಡುತ್ತಾರೆ" ಎಂದು ಶಿವಶರಣೆ ಲಿಂಗಮ್ಮ ಅವರು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾರೆ.

37. "ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ"

ಆಯ್ಕೆ : ಈ ವಾಕ್ಯವನ್ನು ಶ್ರೀ ಪುಲಿಗೆರೆ ಸೋಮನಾಥ ಕವಿಯು ರಚಿಸಿರುವ 'ಸೋಮೇಶ್ವರ ಶತಕ' ಕೃತಿಯಿಂದ ಆಯ್ದ 'ಸೋಮೇಶ್ವರ ಶತಕ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಕವಿ ಸೋಮೇಶ್ವರನು ಲೋಕದಲ್ಲಿ ಜನರು ಹೇಗೆ ಇರಬೇಕು ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಒಂದು ಕುಟುಂಬವು ಆನಂದಮಯವಾಗಿಬೇಕಾದರೆ ಆ ಕುಟುಂಬದ ಒಡತಿಯಾದ ಸತಿಯು ಸದ್ಧರ್ಮವನ್ನು ಪಾಲಿಸುವಂತವಳಾಗಿರಬೇಕು. ಸದ್ಧರ್ಮವನ್ನು ಪಾಲಿಸುವ ಸತಿಯಿಂದ ಮನೆಯ ಯಜಮಾನನು ಸರ್ವಸಾಧನೆಯನ್ನು ಮಾಡಲು ಸಾಧ್ಯ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

38. "ನಮ್ಮಯ ದೇಶಕತಿಶಯ ನರೆದಲೆಗ"

ಆಯ್ಕೆ : ಈ ಮಾತನ್ನು ಶ್ರೀಕನಕದಾಸರು ರಚಿಸಿರುವ 'ರಾಮಧಾನ್ಯ ಚರಿತೆ' ಎಂಬ ಕೃತಿಯಿಂದ ಆಯ್ದ 'ರಾಮಧಾನ್ಯ ಚರಿತೆ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಶ್ರೀರಾಮನು ಗೌತಮ ಮುನಿಯ ಆಶ್ರಮದಲ್ಲಿ ವಿವಿಧ ಭಕ್ಷ್ಯಭೋಜ್ಯಗಳಿಂದ ಕೂಡಿದ ಆತಿಥ್ಯವನ್ನು ಸ್ವೀಕರಿಸಿ ತಾನು ಸವಿದ ಧಾನ್ಯಗಳ ಮಹತ್ತ್ವವನ್ನು ತಿಳಿಸಬೇಕೆಂದು ಗೌತಮ ಮುನಿಯನ್ನು ಕೇಳಿಕೊಂಡ ಸಂದರ್ಭದಲ್ಲಿ ಗೌತಮ ಮುನಿಗಳು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ದೇಶದಲ್ಲಿರುವ ಎಲ್ಲ ಧಾನ್ಯಗಳಿಗಿಂತಲೂ ರಾಗಿಯೇ ಶ್ರೇಷ್ಠವಾದುದು ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**X.** ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . **1*4=4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**39.** ಸತಿ ಅನುಕೂಲ ಬೇಕು ಸುತನಲ್ಲಿ ಗುಣಬೇಕು
ಮತಿವಂತನಾಗಬೇಕು ಮತ ಒಂದಾಗಬೇಕು ॥
ಜಪದ ಜಾಣುವೆ ಬೇಕು ತಪದ ನೇಮವೇ ಬೇಕು
ಉಪವಾಸ ವ್ರತಬೇಕು ಉಪಶಾಂತವಿರಬೇಕು ॥

ಅಥವಾ

ಜ್ಞಾನವೆಂಬೊ ನವರತ್ನದ ಮಂಟಪದ ಮಧ್ಯದಲ್ಲಿ
ಗಾನಲೋಲನ ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆ ॥
ಭಕ್ತಿರಸವೆಂಬ ಮುತ್ತು ಮಾಣಿಕ್ಯದ ಹರಿವಾಣದಿ
ಮುಕ್ತನಾಗಬೇಕೆಂದು ಮುತ್ತಿನಾರತಿಯೆತ್ತುವೆ ॥

**XI.** ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. **1*4=4**

| | |
|---|---|
| ವಿಷಯಾಂಶಕ್ಕೆ | = 3 ಅಂಕಗಳು |
| ಅಡಕವಾಗಿರುವ ಮೌಲ್ಯವನ್ನು ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿ | = 1 ಅಂಕ |
| ಒಟ್ಟು | = 4 ಅಂಕಗಳು |

**40.** ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತಂ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

**ಈ ಪದ್ಯಭಾಗವನ್ನು ಶ್ರೀ ಪುಲಿಗೆರೆ ಸೋಮನಾಥ ಕವಿಯು ರಚಿಸಿರುವ 'ಸೋಮೇಶ್ವರ ಶತಕ' ಕೃತಿಯಿಂದ ಆಯ್ದ 'ಸೋಮೇಶ್ವರ ಶತಕ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**
**ಕವಿ ಸೋಮೇಶ್ವರನು ಲೋಕದಲ್ಲಿ ವಿವಿಧ ವೃತ್ತಿಯ ಜನರು ಹೇಗೆ ಇರಬೇಕು ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.**
**ಈ ಪದ್ಯದಲ್ಲಿ ವೀರತ್ವ, ಪ್ರಾಮಾಣಿಕತೆ, ಧಾರ್ಮಿಕತೆ, ಭಕ್ತಿ, ಧೀರತ್ವ, ಮೊದಲಾದ ಮೌಲ್ಯಯುತ ಅಂಶಗಳು ಪ್ರತಿಪಾದಿತವಾಗಿವೆ.**
**"ಪ್ರಜೆಗಳನ್ನು ಚೆನ್ನಾಗಿ ಸಂರಕ್ಷಣೆಯನ್ನು ಮಾಡಬಲ್ಲವನೇ ದೊರೆ. ಲಂಚಕ್ಕೆ ಆಸೆ ಪಡದವನೇ ನಿಜವಾದ ಮಂತ್ರಿ. ತಂದೆತಾಯಿಗಳನ್ನು ಸಲಹಬಲ್ಲವನೇ ಧರ್ಮಿಷ್ಠ. ದೇವರಲ್ಲಿ ಭಕ್ತಿಯುಳ್ಳವನೇ ಭಕ್ತನು. ನಿರ್ಭಯನಾದವನೇ ಯೋಧನು. ಒಳ್ಳೆಯ ನಡೆತೆಯುಳ್ಳವನೇ ಬ್ರಹ್ಮಜ್ಞಾನಿ" ಎಂದು ಪುಲಿಗೆರೆ ಸೋಮನಾಥ ಕವಿಯು ಹೇಳುತ್ತಾನೆ.**

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

**(ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ = 3 ಅಂಕಗಳು, ಪದಬಂಧ ಮತ್ತು ಭಾಷಾ ಶೈಲಿಗೆ = 1 ಅಂಕ)**

41. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಹೇಗೆ ವರ್ಣಿಸಲಾಗಿದೆ?

**ಮಲೆನಾಡಿನಲ್ಲಿ ಹುಲಿಗಳ ಕಾಟ ಬಹಳ ಇತ್ತು. ಮಲೆನಾಡಿನ ಹಿರಿಯರಿಗೆ ಹುಲಿಯು ದೂರದಲ್ಲಿ ಕೂಗುತ್ತಿದ್ದರೆ ಥಟ್ಟನೆ ತಿಳಿದು ಬಿಡುತ್ತಿತ್ತು. ಹುಲಿಗಳ ಶಬ್ದಕ್ಕೆ ಕೊಟ್ಟಿಗೆಯ ದನಗಳು ಗಡಗಡ ನಡುಗಲು ಆರಂಭಿಸುತ್ತಿದ್ದವು. ಅವುಗಳ ಕೊರಳಿನಲ್ಲಿ ಕಟ್ಟಿದ ಘಂಟೆ ಜೋರು ಶಬ್ದವನ್ನು ಮಾಡುತ್ತಿತ್ತು. ಲೇಖಕರು, ಅವರ ಅಮ್ಮ ಮತ್ತು ಅಜ್ಜ ಚಿಮಣಿಯ ದೀಪದ ಬೆಳಕಿನಲ್ಲಿ ಒಳಗಡೆ ಕೂತು ಎಲ್ಲಿ ಹುಲಿ ನಮ್ಮ ಕೊಟ್ಟಿಗೆಗೂ ನುಗ್ಗಿಬಿಡುತ್ತದೆಯೋ ಎಂದು ಕಾಯುತ್ತಿದ್ದರು. ಮನೆಗೆ ನಿತ್ಯ ಆಳುಗಳು ಬಂದಾಗ "ಯಾವುದೋ ಹುಲಿ ಯಾವುದೋ ದನವನ್ನು ಕಾಡಿನಲ್ಲಿ ಹಿಡೀತು, ಅವರ ಮನೆ ದನ ಹೋಯಿತು, ಇವರ ಮನೆ ದನ ಹೋಯಿತು" ಎಂದು ಮಾತನಾಡಲು ಶುರುಮಾಡುತ್ತಿದ್ದರು. ಹುಲಿ ಆಗ ನಿಜವಾದ ಹಸಿದ ಕಣ್ಣುಗಳ ಕೋರೆದಾಡೆಯ ಮುಖವಾಗಿತ್ತು. ಲೇಖಕರು ಹುಲಿಯ ಭಯದಿಂದ ಪಾರಾಗಲು ಅವರ ಅಜ್ಜ ಹೇಳಿಕೊಟ್ಟ ಅರ್ಜುನ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು. ಅದನ್ನು ಹೇಳುತ್ತಾ ನಿದ್ದೆ ಹೋಗುತ್ತಿದ್ದರು. ಅವರ ಅಮ್ಮ ಮಾತ್ರ ನಿದ್ದೆ ಮಾಡುತ್ತಿರಲಿಲ್ಲ. ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂದು ಗೊತ್ತಾದಾಗ ಮನಸ್ಸಿಗೆ ಸಮಾಧಾನವಾಗುತ್ತಿತ್ತು.**

**ಅಥವಾ**

'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ.

**ಕಾಫಿಬೀಜವನ್ನು ಆಗಲೇ ಹುರಿದು, ಆಗಲೇ ಪುಡಿ ಮಾಡಿ, ಆಗಲೇ ಕುದಿಯುವ ನೀರಿಗೆ ಬೆರೆಸಿ, ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು, ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು, ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ, ಹದಮಾಡಿ, ಮಾಡಿದ ಕಾಫಿಯೇ 'ಒರಿಜಿನಲ್ ಕಾಫಿ' ಒರಿಜಿನಲ್ ಕಾಫಿ ಮಾಡಿ ಉಳಿದ, ಘಮಘಮ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಚರಟವನ್ನು ಕುದಿಸಿ, ಮಾಡಿದ ಕಾಫಿಯೇ ಚರಟದ ಕಾಫಿ.**

42. ಶ್ರೀರಾಮನು ನರೆದಲೆಗ ಹಾಗೂ ವ್ರೀಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು?

**ಒಂದು ದಿನ ಶ್ರೀರಾಮನು ಗೌತಮ ಮುನಿಯ ಆಶ್ರಮಕ್ಕೆ ಬಂದು ವಿವಿಧ ಭಕ್ಷ್ಯಭೋಜ್ಯಗಳ ಆತಿಥ್ಯವನ್ನು ಸ್ವೀಕರಿಸುತ್ತಾನೆ. ಆ ಸಮಯದಲ್ಲಿ ರಾಮನು ತಾನು ಸವಿದ ವಿವಿಧ ಭಕ್ಷ್ಯಭೋಜ್ಯಗಳನ್ನು ತಯಾರಿಸಿದ ಧಾನ್ಯಗಳನ್ನು ನೋಡಬೇಕೆಂದು ಅಪೇಕ್ಷೆ ಪಡುತ್ತಾನೆ. ಆಗ ಗೌತಮರು ಎಲ್ಲ ರೀತಿಯ ಧಾನ್ಯಗಳನ್ನು ತರಿಸಿ, ರಾಮನಿಗೆ ತೋರಿಸಿ, ಅವುಗಳ ಶ್ರೇಷ್ಠತೆಯನ್ನು ಕುರಿತು ಚರ್ಚಿಸುತ್ತಾರೆ. ಆ ಸಮಯದಲ್ಲಿ ಗೌತಮರು "ಕೆಲವರು ಗೋಧಿಯನ್ನು, ಸಾಮೆಯನ್ನು, ನವಣೆಯನ್ನು, ಕಂಬನ್ನು, ಜೋಳವನ್ನು ಹಾರಕವನ್ನು, ಭತ್ತವನ್ನು ಶ್ರೇಷ್ಠವಾದ ಧಾನ್ಯಗಳು ಎಂದು ಹೇಳುವರು. ಆದರೆ ಲೋಕದಲ್ಲಿ ರಾಗಿಯೇ ಶ್ರೇಷ್ಠವಾದುದು" ಎಂದು ಹೇಳುತ್ತಾರೆ. ಆಗ ಭತ್ತವು ಶ್ರೇಷ್ಠನಾದ ನಾನಿರುವಾಗ ರಾಗಿಯನ್ನು ಅತಿಶಯನಾದವನು ಎಂದು ಹೇಳುವುದು ಎಷ್ಟು ಸರಿ? ಎಂದು ಹೇಳಿ, ರಾಗಿಯನ್ನು ಹೀಯಾಳಿಸುತ್ತದೆ. ಹೀಗೆ ರಾಗಿ ಮತ್ತು ಭತ್ತಗಳು ತಮ್ಮ ಶ್ರೇಷ್ಠತೆಯನ್ನು ಹೇಳಿಕೊಂಡು ಪರಸ್ಪರ ಮತ್ಸರದಿಂದ ಜಗಳವಾಡಿಕೊಳ್ಳುತ್ತವೆ. ಆಗ ಶ್ರೀರಾಮನು ರಾಜರಾದ ನಮ್ಮಿಂದ ಇವುಗಳ ನಡುವಿನ ವ್ಯಾಜ್ಯವನ್ನು ಪರಿಹರಿಸಲು ಸಾಧ್ಯವಿಲ್ಲ ಆದ್ದರಿಂದ ಅಯೋಧ್ಯೆಯ ಅರಮನೆಗೆ ಹರಿಹರ ಬ್ರಹ್ಮರನ್ನು ಆಹ್ವಾನಿಸಿ ಇವುಗಳಿಗೆ ನ್ಯಾಯವನ್ನು ಕೊಡಿಸುತ್ತೇನೆ. ಶ್ರೇಷ್ಠವಾದ ಧಾನ್ಯಗಳು ಎಂದು ಹೇಳಿಕೊಳ್ಳುವ ಇವರಿಬ್ಬರು ಆರು ತಿಂಗಳವರೆಗೆ ಸೆರೆಮನೆಯಲ್ಲಿರಲಿ" ಎಂದು ಆಜ್ಞಾಪಿಸುತ್ತಾನೆ.**

**ಅಥವಾ**

ನರೆದಲೆಗ ಹಾಗೂ ವ್ರೀಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ವ್ರೀಹಿಯು ನರೆದಲೆಗನನ್ನು ಕುರಿತು "ಎಲವೋ ನರೆದಲೆಗನೇ, ನೀನು ನನಗೆ ಸಮಾನನೇ ಶ್ರೀರಾಮನ ಸನಿಹದಲ್ಲಿ ಕುಲಹೀನನಾದ ನೀನು ಮತಿಹೀನನಾಗಿ ಪ್ರತಿಷ್ಠೆಯ ಮಾತುಗಳಾಡುವುದನ್ನು ನಿಲ್ಲಿಸು. ಬ್ರಾಹ್ಮಣರು ನನ್ನನ್ನು ಉಪನಯನದಲ್ಲಿ, ವ್ರತಾಚರಣೆಗಳಲ್ಲಿ, ಸುಖಭೋಜನದಲ್ಲಿ, ಪರಮ ಮಂತ್ರಾಕ್ಷತೆಯಲ್ಲಿ, ಶುಭ ಶೋಭನದಲ್ಲಿ, ಆರತಿಯಲ್ಲಿ, ಯಜ್ಞ ಯಾಗಾದಿಗಳಲ್ಲಿ, ಅರಮನೆಗಳಲ್ಲಿ ಪ್ರತಿದಿನವೂ ದೇವರಿಗೆ ಅತಿಶಯವಾದ ನೈವೇದ್ಯವನ್ನು ಮಾಡುವಲ್ಲಿ ಬಳಸುತ್ತಾರೆ" ಎಂದು ಹೇಳಿತು. ಆಗ ನರೆದಲೆಗನು ವ್ರೀಹಿಯನ್ನು ಕುರಿತು "ನೀನು ಸತ್ಯಹೀನನು. ಬಡವರನ್ನು ಕಣ್ಣೆತ್ತಿಯೂ ಸಹ ನೋಡುವುದಿಲ್ಲ. ಹಣವಂತರ ಬೆನ್ನಹಿಂದೆ ನಡೆಯುವ ಅಪೇಕ್ಷೆ ನಿನ್ನದು. ನೀನು ಬಾಣಂತಿಯರಿಗೆ ಮತ್ತು ರೋಗಿಗಳಿಗೆ ಪಥ್ಯನಾದವನು. ಹೆಣದ ಬಾಯಿಗೆ ತುತ್ತು ನೀನು. ಆದ್ದರಿಂದ ನಿನ್ನ ಜನ್ಮ ನಿರರ್ಥಕವಾದುದು. ಮಳೆಯಿಲ್ಲದೆ ಬೆಳೆ ನಾಶವಾಗಿ ಕ್ಷಾಮದ ಕಾಲದಲ್ಲಿ ಅನ್ನವಿಲ್ಲದೆ ನಾಶ ಹೊಂದುವ ಪ್ರಾಣಿಗಳನ್ನು ಆದರಿಸಿ ಸಲಹುವೆನು ನಾನು. ಆ ಸಮಯದಲ್ಲಿ ನೀನು ಮತ್ತು ನಿನ್ನ ಬಳಗದವರು ಎಲ್ಲಿರುವಿರಿ. ಹುಲುಧಾನ್ಯಗಳಾದ ನಮಗೆ ನೀವು ಸರಿಸಮಾನರೇ" ಎಂದು ಹೀಯ್ಯಾಳಿಸಿತು. ಹೀಗೆ ನರೆದಲೆಗ ಮತ್ತು ವ್ರೀಹಿಗಳ ನಡುವೆ ಸಂವಾದ ನಡೆಯಿತು.**

**XIII.** **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4 (2+2)**
**(ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

ಪ್ರಶ್ನೆಗಳು :–

43. (1) ಭಯವನ್ನು ಹೇಗೆ ವರ್ಣಿಸಲಾಗಿದೆ?

**ಭಯವೆಂದರೆ ದಟ್ಟಡವಿಯಲ್ಲಿ ದಾರಿ ತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯ ಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆ ನಾಯಿ ಬೆನ್ನಟ್ಟಿದ ಮೊಲವೇ ಭಯ. ಭಯ ಹುಟ್ಟುವುದು ಅಜ್ಞಾನದಿಂದ, ಪಾಪ ಶಂಕೆಯಿಂದ, ದೂಷಿತ ಹೃದಯದಿಂದ. ಜ್ಞಾನ ಹೆಚ್ಚಿದಂತೆ ಭಯ ಕಡಿಮೆಯಾಗುವುದು.**

43. (2) ನಮ್ಮ ವ್ಯಕ್ತಿತ್ವ ಹೇಗಿರಬೇಕು ?

**ಭೀಷ್ಮ, ದ್ರೋಣನಂತೆ ಒಡೆಯನಿಗೋಸ್ಕರ ದೇಹವನ್ನರ್ಪಿಸುವುದು ಕಾರ್ಯವೆಂದು ತಿಳಿದಿದ್ದರೂ ಆ ಕಾರ್ಯದ ಸಾಧ್ಯತೆ ಅಸಾಧ್ಯತೆಗಳ ಬಗ್ಗೆ ಅಭಿಪ್ರಾಯವು ಭೀಷ್ಮ, ದ್ರೋಣರಲ್ಲಿಯಂತೆ ಸ್ಪಷ್ಟವಾಗಿರಬೇಕು. ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲುವ ಉರುಳಬೇಕಾದಲ್ಲಿ ಉರುಳುವ ಗೋಲವಾಗಬೇಕು ವ್ಯಕ್ತಿತ್ವ. ಈ ಕೇಂದ್ರದಲ್ಲಿಯೇ ವ್ಯಕ್ತಿ–ಸಮಾಜಗಳ ಸಾಮರಸ್ಯದ ಬೀಜವಿದೆ.**

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹೆಮ್ಮರಗಾಲ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಮಾಧವಿ' ಎಂದು ಭಾವಿಸಿಕೊಂಡು, ನಿಮ್ಮ ಅಕ್ಕನ ಮದುವೆಗೆ 5 ದಿನಗಳು ರಜೆಯನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ದಾವಣಗೆರೆಯ ಬಾಪೂಜಿ ನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಮಾನಂದ' ಎಂದು ಭಾವಿಸಿಕೊಂಡು ಚಿತ್ರದುರ್ಗದ ಚಳ್ಳಕೆರೆಯಲ್ಲಿ ವಾಸವಾಗಿರುವ ನಿಮ್ಮ ತಂದೆ 'ನಿಜಲಿಂಗಪ್ಪ' ಎನ್ನುವವರಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ ಸಮಾರಂಭದ ಸಂಭ್ರಮವನ್ನು ಕುರಿತು ಪತ್ರ ಬರೆಯಿರಿ

| **ವ್ಯಾವಹಾರಿಕ ಪತ್ರ** | |
|---|---|
| **ಇಂದ, ಗೆ, ದಿನಾಂಕ, ಸ್ಥಳ, ಸಂಬೋಧನೆ, ವಿಷಯ** | **= 1 ಅಂಕ** |
| **ಪತ್ರದ ಒಡಲು ವಿಷಯ ನಿರೂಪಣೆ** | **= 2 ಅಂಕಗಳು** |
| **ವಂದನೆಯೊಂದಿಗೆ ಮುಕ್ತಾಯ, ಇಂತಿ, ಸಹಿ.** | **= 1 ಅಂಕ** |
| **ಪದ ಬಳಕೆ, ಭಾಷಾಶೈಲಿ ವಿನ್ಯಾಸ** | **= 1 ಅಂಕ** |

****

| **ಖಾಸಗಿ ಪತ್ರ** | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **= 1 ಅಂಕ** |
| **ಪತ್ರದ ಒಡಲು ವಿಷಯ ನಿರೂಪಣೆ** | **= 2 ಅಂಕಗಳು** |
| **ಮುಕ್ತಾಯ, ಇಂತಿ, ಸಹಿ, ಹೊರವಿಳಾಸ** | **= 1 ಅಂಕ** |
| **ಪದ ಬಳಕೆ, ಭಾಷಾಶೈಲಿ ವಿನ್ಯಾಸ** | **= 1 ಅಂಕ** |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. .**
**1*5=5**

**ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ = 1 ಅಂಕ**
**ವಿಷಯ ನಿರೂಪಣೆ / ಒಡಲು / ಸಮರ್ಥ ವಿವರಣೆ = 2 ಅಂಕಗಳು**
**ಉಪ ಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ = 1 ಅಂಕ**
**ಪದಬಂಧ, ಭಾಷಾಶೈಲಿ = 1 ಅಂಕ**

45. ಕಂಪ್ಯೂಟರ್ ಬಳಕೆಯಿಂದಾಗುವ ಪ್ರಯೋಜನಗಳು

**ಅಥವಾ**

ವರದಕ್ಷಿಣೆ – ಒಂದು ಸಾಮಾಜಿಕ ಪಿಡುಗು.

ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 1 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 2 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 3 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 4 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 5 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 6 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 7 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 8 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 9 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 10 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 11 | ಹೂವಾದ ಹುಡುಗಿ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 12 | ಹೂವಾದ ಹುಡುಗಿ | ಗ್ರಹಿಕೆ | ಬರೆಯುತ್ತಾನೆ/ಳೆ | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 13 | ಯಶೋಧರೆ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 14 | ಯಶೋಧರೆ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 15 | ಜೀವನ ದರ್ಶನ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 16 | ರಾಮಧಾನ್ಯ ಚರಿತೆ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 1 | ಸುಲಭ | 2 ನಿಮಿಷಗಳು |
| 17 | ಮಗಳಿಗೆ ಬರೆದ ಪತ್ರಗಳು | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಕಿರು ಉತ್ತರ 2 | 1 | ಸುಲಭ | 2 ನಿಮಿಷಗಳು |
| 18 | ಹೂವಾದ ಹುಡುಗಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 19 | ಯಶೋಧರೆ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸುಲಭ | 4 ನಿಮಿಷಗಳು |
| 20 | ಸಪ್ತಾಕ್ಷರೀ ಮಂತ್ರ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 21 | ಸಪ್ತಾಕ್ಷರೀ ಮಂತ್ರ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 22 | ವಚನಾಮೃತ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 23 | ಜೀವನ ದರ್ಶನ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 24 | ಆಹುತಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 25 | ಆಹುತಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 26 | ಆಟೋರಿಕ್ಷಾದ ರಸಪ್ರಸಂಗಗಳು | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 27 | ಆಟೋರಿಕ್ಷಾದ ರಸಪ್ರಸಂಗಗಳು | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 28 | ಯಶೋಧರೆ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 29 | ವಚನಾಮೃತ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 30 | ಛಂದಸ್ಸು | ಗ್ರಹಿಕೆ | ಪ್ರಸ್ತಾರ ಹಾಕುತ್ತಾನೆ / ಳೆ | ದೀರ್ಘ ಉತ್ತರ 1 | 3 | ಸುಲಭ | 5 ನಿಮಿಷಗಳು |
| 31 | ಅಲಂಕಾರ | ಗ್ರಹಿಕೆ | ಸಮನ್ವಯಗೊಳಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಕಠಿಣ | 5 ನಿಮಿಷಗಳು |
| 32 | ಗಾದೆ ವಿಸ್ತರಿಸಿ ಬರೆಯುವುದು | ಗ್ರಹಿಕೆ | ವಿಸ್ತರಿಸಿ ಬರೆಯುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 33 | ಹೂವಾದ ಹುಡುಗಿ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 34 | ಅಮ್ಮ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 35 | ಸಪ್ತಾಕ್ಷರೀ ಮಂತ್ರ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 36 | ವಚನಾಮೃತ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 37 | ಸೋಮೇಶ್ವರ ಶತಕ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 38 | ರಾಮಧಾನ್ಯ ಚರಿತೆ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 39 | ಜೀವನ ದರ್ಶನ | ಜ್ಞಾನ / ಸ್ಮರಣೆ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 2 | 4 | ಸುಲಭ | 7 ನಿಮಿಷಗಳು |
| 40 | ಸೋಮೇಶ್ವರ ಶತಕ | ಪ್ರಶಂಸೆ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 41 | ಅಮ್ಮ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 42 | ರಾಮಧಾನ್ಯ ಚರಿತೆ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 43 | ಅಪಠಿತ ಗದ್ಯ | ಗ್ರಹಿಕೆ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 2 | 4 | ಸುಲಭ | 7 ನಿಮಿಷಗಳು |
| 44 | ಪತ್ರಲೇಖನ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 3 | 5 | ಸಾಧಾರಣ | 8 ನಿಮಿಷಗಳು |
| 45 | ಪ್ರಬಂಧ ಲೇಖನ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 3 | 5 | ಕಠಿಣ | 8 ನಿಮಿಷಗಳು |
| 45 | ಒಟ್ಟು | | | | 100 | | 180 ನಿಮಿಷಗಳು + 15 ನಿಮಿಷಗಳು |

**ಶುಭವಾಗಲಿ**